ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಚಿತ್ತಾಪುರ ಮತಕ್ಷೇತ್ರದಲ್ಲಿ ಬರುವ ಈ ಎಲ್ಲಾ ಕೆರೆಗಳಿಗೆ ಕಾಲುವೆಗಳು ಇರುತ್ತವೆ. ಕಳೆದ ಸಾಲಿನ ಮಳೆಗಾಲದಲ್ಲಿ ಅಲ್ಪ ಪ್ರಮಾಣದ ಮಳೆ ಬಂದಿರುವುದರಿಂದ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಕೆರೆಯಲ್ಲಿ ನೀರು ತುಂಬಿರುತ್ತದೆ. 2005ರ ಮಳೆಗಾಲದ ತನಕ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಅವಶ್ಯಕತೆ ಇರುವುದರಿಂದ, ಕೆರೆಯಿಂದ ರೈತರ ಜಮೀನಿಗೆ ನೀರು ಕೊಡಲು ಸಾಧ್ಯವಾಗಿರುವುದಿಲ್ಲ.

383 (137) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಚಿತ್ತಾಪುರ): ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸ್ತೆ ಸಾರಿಗೆ ನಿಗಮಗಳು ಯಾವುವು;

ಆ) ಈ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಹಾನಿ ಮತ್ತು ಲಾಭ ಕಳೆದ ಮೂರು ವರ್ಷಗಳಲ್ಲಿ ಎಷ್ಟು;

ಇ) 31.3.03, 31.3.04ಕ್ಕೆ ಇವುಗಳ ಒಟ್ಟು ಲಾಭ ಮತ್ತು ಹಾನಿ ಎಷ್ಟು?

ಈ) ಈ ನಿಗಮಗಳ ವ್ಯಾಪ್ತಿಯಲ್ಲಿ ಎಷ್ಟು ಕಂಪನಿ ಅಥವಾ ಜನರಿಗೆ ಬಸ್ಸುಗಳನ್ನು ಓಡಿಸಲು ಸಾರಿಗೆ ಸಂಸ್ಥೆಯ ಎಷ್ಟು ಮಾರ್ಗಗಳನ್ನು ಕೊಡಲಾಗಿದೆ.

ಉ) ಯಾರಾರಿಗೆ ಕೊಡಲಾಗಿದೆ ಹಾಗೂ ಅವುಗಳ ಕರಾರು ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) 1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ.

2) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.

3) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

4) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

ಆ) ಸಂಸ್ಥೆಗಳ ಲಾಭ ಮತ್ತು ನಷ್ಟದ ವಿವರ ಈ ಕೆಳಗಿನಂತಿದೆ:

(ರೂ.ಲಕ್ಷಗಳಲ್ಲಿ)

ಸಂಸ್ಥೆಯ ಹೆಸರು	ಲಾಭ ಮತ್ತು ನಷ್ಟ					
	2001–02		2002–03		2003–04	
	ನಷ್ಟ	ಲಾಭ	ನಷ್ಟ	ಲಾಭ	ನಷ್ಟ	ಲಾಭ
ಕ.ರಾ.ರ.ಸಾ.ಸಂ.	–	1652.00	–	3274.00	–	2587.00
ಬೆಂ.ಮ.ಸಾ.ಸಂ.	–	2670.00	–	2764.00	–	7739.00
ವಾ.ಕ.ರಿ.ಸಾ.ಸಂ.	–	1171.54	–	1228.15	968.98	–
ಈ.ಕ.ರ.ಸಾ.ಸಂ.	1818.70	–	1498.08	–	1290.34	–

ಇ) ಸಂಸ್ಥೆಗಳ ಲಾಭ ಮತ್ತು ನಷ್ಟದ ವಿವರ ಈ ಕೆಳಗಿನಂತಿದೆ:

(ರೂ.ಲಕ್ಷಗಳಲ್ಲಿ)

ವರ್ಷ	ಲಾಭ ಮತ್ತು ನಷ್ಟ							
	ಕ.ರಾ.ರ.ಸಾ.ಸಂ		ಬೆಂ.ಮ.ಸಾ.ಸಂ.		ವಾ.ಕ.ರ.ಸಾ.ಸಂ.		ಈ.ಕ.ರ.ಸಾ.ಸಂ.	
	ನಷ್ಟ	ಲಾಭ	ನಷ್ಟ	ಲಾಭ	ನಷ್ಟ	ಲಾಭ	ನಷ್ಟ	ಲಾಭ
31.3.2003ಕ್ಕೆ	27918.00	–	–	1466.00	108,2765.00	–	149808.00	–
31.3.2004ಕ್ಕೆ	25331.00	–	–	9205.00	117,96,63.00	–	129034.00	–

ಈ) ಕೊಟ್ಟಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

386 (936) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ರಚಿಸಿರುವ ವಿಶೇಷ ಕಾನೂನು ಸಲಹಾ ಸಮಿತಿಯನ್ನು ಸರ್ಕಾರ ಯಾವಾಗ ರಚಿಸಲಾಗಿದೆ;

ಆ) ಯಾರ ನೇತೃತ್ವದಲ್ಲಿ ಸದರಿ ಸಮಿತಿಯನ್ನು ರಚಿಸಲಾಗಿದೆ ಹಾಗೂ ಇದರ ಸದಸ್ಯರುಗಳು ಯಾರು;

ಇ) ಬಂದಿದ್ದಲ್ಲಿ, ಯಾವ ಯಾವ ಅವ್ಯವಹಾರದಲ್ಲಿ ಈ ಅಕ್ರಮ ನಡೆದಿದೆ;

ಈ) ಇದರ ಮೌಲ್ಯವೆಷ್ಟು;

ಉ) ಇದರಲ್ಲಿ ಷಾಮೀಲಾಗಿರುವವರು ಯಾರ್ಯಾರು;

ಊ) ಇವರೆಲ್ಲಾ ತಪ್ಪಿತಸ್ಥರೆಂದು ಸಾಬೀತಾಗಿದೆಯೇ;

ಋ) ಈ ಅಕ್ರಮಗಳು ಬೆಳಕಿಗೆ ಬಂದಿದ್ದು ಹೇಗೆ;

ಎ) ಇಲ್ಲಿನ ಅಕ್ರಮಗಳಲ್ಲಿ ನಿಗಮದ ಆಸ್ತಿಯನ್ನು ಮಾರಾಟ ಮಾಡಿರುವುದು ಸಹ ಒಳಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬಂದಿದೆ.

ಆ) ಕಳಪೆ ಕಾಮಗಾರಿ, ಹೆಚ್ಚುವರಿ ಹಣ ಪಾವತಿ, ಖೊಟ್ಟಿ ಬಿಲ್ಲು ಮಾಡಿದ್ದು, ಖೊಟ್ಟಿ ಬ್ಯಾಂಕ್ ಗ್ಯಾರಂಟಿ, ಇತ್ಯಾದಿ ಅವ್ಯವಹಾರಗಳ ಬಗ್ಗೆ ದೂರುಗಳು ಬಂದಿವೆ.

ಇ) ಮೌಲ್ಯವನ್ನು ನಿರ್ದಿಷ್ಟವಾಗಿ ಈ ಹಂತದಲ್ಲಿ ಹೇಳಲು ಸಾಧ್ಯವಾಗುವುದಿಲ್ಲ.

ಈ) ಗುತ್ತಿಗೆದಾರರು ಮತ್ತು ಅಧಿಕಾರಿಗಳು.

ಉ) ಇನ್ನೂ ಸಾಬೀತಾಗಬೇಕಿದೆ.

ಊ) ವಿಚಕ್ಷಣಾ ದಳದ ವರದಿಗಳಿಂದ.

ಋ) ಇಲ್ಲ.